KATK010000022021

<u>**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಮತ್ತು ವಿಶೇಷ ನ್ಯಾಯಾಧೀಶರು(ಎನ್.ಡಿ.ಪಿ.ಎಸ್) ಇವರ ನ್ಯಾಯಾಲಯದಲ್ಲಿ**</u>

**ವಿಶೇಷ ಮೊಕದ್ದಮೆ ಸಂಖ್ಯೆಃ 1/2021**

<u>**ಫಿರ್ಯಾದಿ**</u> :- ರಾಜ್ಯದ ಪರವಾಗಿ ಹುಳಿಯಾರು ಪೋಲೀಸ್

**ವಿರುದ್ಧ**

<u>**ಆರೋಪಿತರು**</u> :- ಶಶಿಕುಮಾರ್ ನಾಯ್ಕು ಮತ್ತು ಇತರರು

<u>**ದೋಷಾರೋಪಣೆ**</u>

**ಬಿ.ಜಯಂತ ಕುಮಾರ್, ಬಿ.ಎ.ಲಾ., ಎಲ್.ಎಲ್.ಎಮ್.** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಆದ ನಾನು ಆರೋಪಿತರಾದಃ

1. ಶಶಿಕುಮಾರನಾಯ್ಕು
   ಬಿನ್ ಲೇಟ್ ರಮೇಶ್ ನಾಯ್ಕು,
   28 ವರ್ಷ, ವ್ಯಾಪಾರ,
   ವಾಸಃ ಕೆ.ಎಸ್.ಆರ್.ಟಿ.ಸಿ. ಡಿಪೋ ಪಕ್ಕ,
   ಶಿರಾ ಟೌನ್.
   ಸ್ವಂತ ಊರುಃ ಮಾನಂಗಿ ತಾಂಡ,
   ಕಸಬಾ ಹೋಬಳಿ, ಸಿರಾ ತಾಲ್ಲೂಕು.

2. ಚಂದ್ರಯ್ಯ ಬಿನ್ ಲೇಟ್ ನರಸಿಂಹಯ್ಯ,
   73 ವರ್ಷ, ವ್ಯವಸಾಯ,
   ವಾಸಃ ಅಣೇಪಾಳ್ಯ, ಹುಳಿಯಾರು
   ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು,
   ತುಮಕೂರು.

3. ಲೋಕೇಶ @ ಲೋಹಿತ ಬಿನ್ ನಾರಾಯಣಪ್ಪ,
22 ವರ್ಷ, ಕಾರ್ಮಿಕ,
ವಾಸಃ ಕಣಿವೆ ಕ್ರಾಸ್, ತಿಮ್ಮನಹಳ್ಳಿ ಪೋಸ್ಟ್,
ಕಂದಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ
ತಾಲ್ಲೂಕು, ತುಮಕೂರು.

4. ಅಭಿಷೇಕ್.ಸಿ ಬಿನ್ ಪಿ.ಆರ್.ಚೌಡೇಗೌಡ,
27 ವರ್ಷ, ವಾಸಃ ಪಂಚಿಗಾನಹಳ್ಳಿ,
ಲಕ್ಕೀಸಾಗರ ಪೋಸ್ಟ್, ಕಸಬಾ ಹೋಬಳಿ,
ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ.

5. ಕೇಶವರಾಥೋಡ್,
ಬಿನ್ ನರಸಿಂಗ ರಾಥೋಡ್, 29 ವರ್ಷ,
ವಾಸಃ ವಿಜಯನಗರ, ವಲ್ಲೇಪುರ್ ತಾಂಡ,
ಜಂಬ್ಗಿ ಗ್ರಾಮ ಪಂಚಾಯ್ತಿ,ಔರಾದ್
ತಾಲ್ಲೂಕು, ಬೀದರ್ ಜಿಲ್ಲೆ.
ಹಾಲಿ ವಾಸಃ ಎಫ್ ಬ್ಲಾಕ್, ಆರ್.ಕೆ.
ಬಿಲ್ಡಿಂಗ್, ಅಯ್ಯಪ್ಪ ಬೇಕರಿ ಸಮೀಪ,
ಯಾರಂಡನಹಳ್ಳಿ, ಬೆಂಗಳೂರು ಟೌನ್.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕ **19.09.2020** ರಂದು ಬೆಳಿಗ್ಗೆ **9-00** ಗಂಟೆ ಸಮಯದಲ್ಲಿ ಠಾಣಾ ಸರಹದ್ದು ಹುಳಿಯಾರು ಹೋಬಳಿ ಕಾರೇಹಳ್ಳಿ ಗ್ರಾಮದಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ **1** ನೇ ಆರೋಪಿಯಾದ ನೀನು KA-02-JA-2907 ನಂಬರಿನ (ಇಂಜಿನ್ ನಂ.JF50ET1257510 ಮತ್ತು ಚಾಸಿಸ್ ನಂ.ME4JF502HET256017) ಹೋಂಡಾ ಆಕ್ಟಿವಾ ವಾಹನದಲ್ಲಿ 4 ನೇ ಆರೋಪಿಯಾದ ನಿನ್ನಿಂದ ತಂದಿದ್ದ 1 ಕೆ.ಜಿ. 250 ಗ್ರಾಂ ತೂಕದ ಗಾಂಜಾ ಸೊಪ್ಪನ್ನು ಕಪ್ಪು ಬಣ್ಣದ ಎರಡು ಪ್ಲಾಸ್ಟಿಕ್ ಕವರ್ ಗಳಲ್ಲಿ ತೆಗೆದುಕೊಂಡು ಬಂದು **2** ಮತ್ತು **3** ನೇ ಆರೋಪಿಗಳಾದ ನಿಮಗೆ ಮಾರಾಟ ಮಾಡಲು ಬಂದಿದ್ದು**,** **2** ನೇ ಆರೋಪಿಯಾದ ನೀನು ನಿನ್ನ ಜೊತೆ **3** ನೇ ಆರೋಪಿಯಾದ ನಿನ್ನನ್ನು ಕರೆದುಕೊಂಡು **1** ನೇ ಆರೋಪಿಯಾದ ನಿನ್ನಿಂದ ಗಾಂಜಾವನ್ನು ಕೊಂಡುಕೊಳ್ಳಲು ರೂ**.11,950/-** ನಗದು ಹಣವನ್ನು ಹಾಗೂ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ತೂಕದ ಒಂದು ಸ್ಟೀಲ್ ತಕ್ಕಡಿ**, 5** ಗ್ರಾಂ ತೂಕದ ಒಂದು ಬಟ್ಟು**, 20** ಗ್ರಾಂ ತೂಕದ **2** ಬಟ್ಟುಗಳು ಮತ್ತು **50** ಗ್ರಾಂ ತೂಕದ ಒಂದು

ಬಟ್ಟುಗಳನ್ನು ಇಟ್ಟುಕೊಂಡು **2** ಮತ್ತು **3** ನೇ ಆರೋಪಿಗಳಾದ ನಿಮ್ಮ ಬಳಿ ಉಳಿದಿದ್ದ **10** ಗ್ರಾಂ ತೂಕದ **3** ಗಾಂಜಾ ಸೊಪ್ಪಿನ ಪ್ಯಾಕೇಟ್ಗಳನ್ನು ಪ್ರತ್ಯೇಕವಾಗಿ ಜಿಪ್ ಲಾಕ್ ಕವರ್ ನಲ್ಲಿ ಇಟ್ಟುಕೊಂಡು ಬಂದಿದ್ದು**,** **1** ರಿಂದ **4** ನೇ ಆರೋಪಿತರಾದ ನೀವು **1** ಕೆ.ಜಿ. ಗಾಂಜಾ ಸೊಪ್ಪಿಗೆ ರೂ**.10,000/-** ದಂತೆ ಸಾರ್ವಜನಿಕರಿಗೆ ಮಾರಾಟ ಮಾಡಿ ಅಕ್ರಮವಾಗಿ ಹಣವನ್ನು ಸಂಪಾದನೆ ಮಾಡುತ್ತಿದ್ದು**,** **5** ನೇ ಆರೋಪಿಯಾದ ನೀನು ಗಾಂಜಾ ಸೊಪ್ಪನ್ನು ಬೀದರ್ ಟೌನ್ ನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಯಾರೋ ವ್ಯಕ್ತಿಗಳಿಂದ ಆಗಾಗ್ಗೆ **2** ಕೆ.ಜಿ. ಗಾಂಜಾ ಸೊಪ್ಪನ್ನು ರೂ**.12,000/-**ಗಳಿಗೆ ಖರೀದಿ ಮಾಡಿ ಸದರಿ ಗಾಂಜಾ ಸೊಪ್ಪನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ ಅಕ್ರಮವಾಗಿ ಹಣವನ್ನು ಸಂಪಾದನೆ ಮಾಡುವ ಉದ್ದೇಶದಿಂದ **1** ಮತ್ತು **4** ನೇ ಆರೋಪಿಗಳಾದ ನಿಮಗೆ ಪ್ರತಿ **2** ಕೆ.ಜಿ. ಗಾಂಜಾ ಸೊಪ್ಪಿಗೆ ರೂ**.15,000/-** ಗಳಿಗೆ ಮಾರಾಟ ಮಾಡುತ್ತಿದ್ದು**,** ಆ ಮೂಲಕ ಆರೋಪಿತರಾದ ನೀವು ಎನ್.ಡಿ.ಪಿ.ಎಸ್.ಕಾಯ್ದೆ ಕಲಂ **20(b)(ii)(B)** ಸಂಗಡ ಕಲಂ **25** ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ **17.01.2024** ರಂದು ಆದೇಶಿಸಿದ್ದೇನೆ.

(ಬಿ. ಜಯಂತ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮತ್ತು ವಿಶೇಷ ನ್ಯಾಯಾಧೀಶರು(ಎನ್.ಡಿ.ಪಿ.ಎಸ್),
ತುಮಕೂರು.